# ಲೆಹಂಗಾ ಮರೆಯಲಿ ಹ್ಯಾಂಗ?

**ಲೆಹಂಗಾಕ್ಕೆ ಫ್ಯಾಷನ್ ಲೋಕದಲ್ಲಿ ಎಲ್ಲಿಲ್ಲದ ಬೇಡಿಕೆ ಬಂದುಬಿಟ್ಟಿದೆ. ಪುಟ್ಟ ಹುಡುಗಿಯಿಂದ ಹಿಡಿದು ಮದುಮಗಳವರೆಗೂ ಲೆಹಂಗಾ ಮೋಡಿ ಮಾಡಿದೆ. ಹಾಫ್ ಸೀರೆ ಫ್ಯಾಷನ್‌ನಂತೆಯೇ ಲೆಹಂಗಾ ಎಂಟ್ರಿ ಕೊಟ್ಟು ಕೆಲವೇ ದಿನಗಳಲ್ಲಿ ಫ್ಯಾಷನ್ ಟ್ರೆಂಡ್ ಆಗಿ ಮೆರೆಯುತ್ತಿರುವುದಾದರು ಹೇಗೆ? ಮಿರರ್ ವರ್ಕ್‌ನ ಬನಾರಸ್ ಲೆಹಂಗಾ, ಇಕತ್ ಲೆಹಂಗಾ, ಜಾಕೆಟ್ ಲೆಹಂಗಾ ಒಂದಕ್ಕಿಂತ ಒಂದು ಹೆಚ್ಚು ಆಕರ್ಷಣೀಯವಾಗಿದೆ.**

**■ ಪವಿತ್ರಾ ರಾಘವೇಂದ್ರ ಶೆಟ್ಟಿ**



ಹಿಂದೆಲ್ಲ ಹಾಫ್ ಸೀರೆ ಫ್ಯಾಷನ್ ಆಗಿದ್ದರೆ ಇದೀಗ ಅದರದೇ ಸುಧಾರಿತ ರೂಪ ಲೆಹಂಗಾ ಫ್ಯಾಷನ್ ಟ್ರೆಂಡ್. ಪುಟ್ಟ ಹುಡುಗಿ ಜರಿಲಂಗ ತೊಡುತ್ತಿದ್ದಂತೆ ಈಗ ಪುಟಾಣಿಯಿಂದ ಹಿಡಿದು ಮದುಮಗಳವರೆಗೆ ಎಲ್ಲ ಹೆಂಗಳೆಯರೂ ಲೆಹಂಗಾವನ್ನೇ ಇಷ್ಟಪಡುತ್ತಿದ್ದಾರೆ. ಹಬ್ಬ ಹರಿದಿನ, ಮದುವೆ ಮುಂಜಿಗಳಂತಹ ಸಮಾರಂಭಗಳಲ್ಲಂತೂ ಈಗೀಗ ಲೆಹಂಗಾದ್ದೇ ಕಾರುಬಾರು.

ಪ್ಯಾಂಟ್ ಟೀ ಶರ್ಟ್, ಸ್ಕರ್ಟ್, ಫ್ರಾಕ್ ತೊಟ್ಟು ಓಡಾಡುವ ಮಗು ಲೆಹಂಗಾ ಚೋಲಿನೋ, ಹಾಫ್ ಸೀರೆನೋ ತೊಟ್ಟುಕೊಂಡು ಮನೆ ತುಂಬಾ ಓಡಾಡುತ್ತಿದ್ದರೆ ಆ ಕಳೆಯೇ ಬೇರೆ. ಜರಿ ಅಂಚಿನ ಹಾಫ್ ಸೀರೆಯಂತೆಯೇ, ಮಿರಿ ಮಿರಿಗುಟ್ಟುವ ಲೆಹಂಗಾದಲ್ಲಿ ನಮ್ಮ ಮನೆಯ ಹೆಣ್ಣುಮಗುವೊಂದು ಸರಭರ ಸರಭರ ಎಂದು ನಡೆಯುತ್ತಿದ್ದರೆ ಅದನ್ನು ನೋಡುವುದೇ ಕಣ್ಣಿಗಾನಂದ. ಈಗ ಟ್ರೆಂಡ್‌ನ ಹೆಸರಿನಲ್ಲಿ ದಿನಕ್ಕೊಂದು ಬಗೆಯ ಫ್ಯಾಷನ್ ಮಾರುಕಟ್ಟೆಯಲ್ಲಿದ್ದರೂ ಹಬ್ಬ ಹರಿದಿನಗಳು ಬಂತೆಂದರೆ ಹೆಣ್ಣುಮಕ್ಕಳ ಕಣ್ಣು ಲೆಹಂಗಾ, ಹಾಫ್ ಸೀರೆಯತ್ತ ಹರಿಯುತ್ತದೆ.

ಈಗ ಸಾಂಪ್ರದಾಯಿಕ ಉಡುಗೆಗೆ ಸಮಕಾಲೀನ ಟಚ್ ನೀಡಿ ಅದನ್ನು ಇನ್ನಷ್ಟು ಅಂದವಾಗಿ ವಿನ್ಯಾಸ ಮಾಡುವವರಿಂದ ಈ ಹಾಫ್ ಸೀರೆ, ಲೆಹಂಗಾಕ್ಕೆ ಎಲ್ಲಿಲ್ಲದ ಬೇಡಿಕೆ ಎನ್ನಬಹುದು. ಟ್ರೆಡಿಷನಲ್ ಗಾಗ್ರಾ, ಬ್ರೈಡಲ್ ಗಾಗ್ರಾ, ಬಾಲಿವುಡ್ ಗಾಗ್ರಾ ಹೀಗೆ ಇನ್ನು ಕೆಲವು ಟ್ರೆಂಡ್‌ನಲ್ಲಿವೆ. ಆದರೆ ಇಲ್ಲಿ ಮುಖ್ಯವಾಗಿ ಮಕ್ಕಳ ಮುದ್ದು ಮೈಯನ್ನು ಅಪ್ಪುವ ಈ ಲೆಹಂಗಾ ಚೋಲಿ/ ಗಾಗ್ರಾ ಚೋಲಿ ಎಲ್ಲರ ಕಣ್ಮನ ಸೆಳೆಯುತ್ತಿದೆ.

ಎ ಲೈನ್‌ನ ಫ್ಲೇರ್ಡ್, ಕಾಲಿಯಾ ಮತ್ತು ಪ್ಲೀಟ್‌ಗಳೊಂದಿಗಿನ ಲೆಹಂಗಾ ಈಗ ಟ್ರೆಂಡ್ ಆಗಿದೆ. ಇದರ ಜತೆಗೆ ದುಪಟ್ಟಾಗಳ ಹಂಗಿಲ್ಲದ ಜಾಕೆಟ್ ಲೆಹಂಗಾಗಳು ಹೆಚ್ಚು ಆರಾಮದಾಯಕವಾದ ಡ್ರೆಸ್ ಆಗಿದೆ. ಜತೆಗೆ ಈ ರೀತಿಯ ಲೆಹಂಗಾ ಧರಿಸಿ ಆರಾಮಾದಿಂದ ಓಡಾಡಬಹುದು. ಇದರ ಜತೆಗೆ ಗ್ಲಾಸ್ ಟಿಶ್ಯೂ, ಜಮಾವರ್, ಪ್ಯಾಚ್ ವರ್ಕ್, ನೆಟ್ ಲೆಹಂಗಾ, ಎಂಬ್ರಾಯ್ಡರಿ, ಜಾರ್ಜೆಟ್... ಹೀಗೆ ಇನ್ನು ಹತ್ತಾರು ಬಗೆಯ ಗಾಗ್ರಾ ಡಿಸೈನ್‌ನ ಸ್ಪೆಷಾಲಿಟಿಗಳು. ಇವುಗಳಲ್ಲಿ ಸಾಕಷ್ಟು ಬಗೆಯ ಡಿಸೈನ್‌ಗಳು ಲಭ್ಯವಿದೆ. ಅಂದಹಾಗೆ ಮಕ್ಕಳಿಗೆ ಹೆಚ್ಚು ಭಾರವಲ್ಲದ ಲೈಟ್ ವೈಟ್ ಲೆಹಂಗಾ, ಮದುವೆ, ಹಬ್ಬಗಳಿಗೆ ಹೇಳಿ ಮಾಡಿಸಿದಂತಹ ಡಿಸೈನರ್ ಲೆಹಂಗಾ, ಫಿಶ್ ಕಟ್ ಲೆಹಂಗಾ ಹೆಚ್ಚು ಆಕರ್ಷಣೀಯವಾಗಿದೆ. ದುಬಾರಿಯೂ ಅಲ್ಲದ ಹಾಗೂ ಆಭರಣಗಳ ಹಂಗಿಲ್ಲದೇ ಇರುವುದರಿಂದ ಈ ಲೆಹಂಗಾ ಚೋಲಿಗಳು ಎಲ್ಲರ ಆದ್ಯತೆ ಆಗಿಬಿಟ್ಟಿದೆ.

ಮಕ್ಕಳ ಲೆಹಂಗಾದಲ್ಲಿ ಬನಾರಸ್ ಸಿಲ್ಕ್‌ನಲ್ಲಿ ಸ್ಟೋನ್ ಹಾಗೂ ಮಿರರ್ ವರ್ಕ್ ಇರುವ ಬಾರ್ಡರ್ ಶೈಲಿಯ ಲೆಹಂಗಾ, ನೆಟ್ ಲೆಹಂಗಾ, ಇಕ್ಕತ್ ಲೆಹಂಗಾಗಳು ಟ್ರೆಂಡ್. ಹಾಗೇ ಫ್ಯೂರ್